## ಹಿತಕರವಾದ ವಾತಾವರಣದಲ್ಲಿ ಸೌಲಭ್ಯಪೂರ್ಣ ಪೂಜಾ ಸಂದರ್ಶನ ಹಾಗೂ ವರ್ಣರಂಜಿತ ನಯನ ಮನೋಹರ ಸ್ಥಳಗಳ ಯಾತ್ರಾ ಪ್ರವಾಸಗಳು

**ರೂಂ ವಸತಿ, ಊಟ – ಉಪಚಾರದೊಂದಿಗೆ ರೈಲ್ವೆ ಕೋಚ್ ಹಾಗೂ ಲಕ್ಸುರಿ ಬಸ್ಸಿನಲ್ಲಿ**

**ಪವಿತ್ರ ಪಂಚದ್ವಾರಕ ಹಾಗೂ ಜ್ಯೋತಿರ್ಲಿಂಗಗಳ ಪೂಜಾ ಪ್ರವಾಸ** : (ರಾಜಾಸ್ಥಾನ್, ಗುಜರಾತ್, ಮಧ್ಯಪ್ರದೇಶ್, ಮಹಾರಾಷ್ಟ್ರ, ರಾಜ್ಯಗಳು) – ಜೈಪುರ್, ಪುಷ್ಕರ್, ನಾಥದ್ವಾರ್, ಕಾಂಕ್ರೋಲಿ, ಚಿತ್ತೋರ್‌ಘಡ್, ಉದಯ್‌ಪುರ್, ಮೌಂಟ್ ಅಬು, ಮಾತೃಗಯಾ, ಸೋಮನಾಥ್, ದ್ವಾರಕ, ನಾಗೇಶಂ, ಅಹಮದಾಬಾದ್, ಉಜ್ಜಯಿನಿ, ಓಂಕಾರೇಶ್ವರ, ಪರ್ಲಿ ವೈದ್ಯನಾಥ್, ಘೃಷ್ಣೇಶ್ವರ್, ಶಿರಡಿ, ನಾಸಿಕ್, ತ್ರಯಂಭಕೇಶ್ವರ, ಭೀಮಾಶಂಕರ್

**ಹೊರಡುವ ದಿನಾಂಕ : 01-12-2010, ರಿಂದ 23 ದಿನಗಳ ಪರ್ಯಂತ**

**ಪಂಚರಾಮ ದೇವಾಲಯಗಳ ಸಹಿತ ಆಂಧ್ರಪ್ರದೇಶ ಸ್ಪೆಷಲ್** : ಭದ್ರಾಚಲಂ, ವಾಸವಿ ಪೆನುಕೊಂಡ, ರ್‍ಯಾಲಿ, ದ್ರಾಕ್ಷಾರಾಮ, ಪಾಲಕೊಲ್ಲು, ಸಮಾಲ್‌ಕೋಟ್, ಸಿಂಹಾಚಲಂ, ವಿಶಾಖಪಟ್ನಂ, ಬುರ್‍ರಾಕೇವ್ಸ್, ಅನ್ನಾವಾರಂ, ವಿಜಯವಾಡ, ಅಮರಾವತಿ.

**ಹೊರಡುವ ದಿನಾಂಕ : 12-12-2010, 23-12-2010, 25-12-2010 ರಿಂದ 9 ದಿನಗಳು**

**ನವಗ್ರಹ ದೇವಾಲಯಗಳ ಸಹಿತ ದಕ್ಷಿಣ ಭಾರತ ಪ್ರವಾಸ** : ತಿರುವಣ್ಣಾಮಲೈ, ಚಿದಂಬರಂ, ತಿರುನಲ್ಲಾರು, ತಂಜಾವೂರು, ಕುಂಭಕೋಣಂ, ಶ್ರೀರಂಗಂ, ಪಳನಿ, ರಾಮೇಶ್ವರಂ, ಕನ್ಯಾಕುಮಾರಿ, ತಿರುವನಂತಪುರಂ, ಕಾಲಡಿ, ಗುರುವಾಯೂರು, ನಂಜನಗೂಡು

**ಹೊರಡುವ ದಿನಾಂಕ : 12-12-2010, 23-12-2010, 25-12-2010 ರಿಂದ 10 ದಿನಗಳು**

**ಮಾಘಮಾಸ ಹಾಗೂ ಶಿವರಾತ್ರಿ ಪ್ರಯುಕ್ತ** : ವಾರಣಾಸಿ, ನೇಪಾಳ-ಪಶುಪತಿನಾಥ್, ಮುಕ್ತಿನಾಥ್ – ಸಾಲಿಗ್ರಾಮ ನಾರಾಯಣ ಮಂದಿರ, ಅಯೋಧ್ಯೆ, ನೈಮಿಷಾರಣ್ಯ, ಚಿತ್ರಕೂಟ, ಅಲಹಾಬಾದ್, ಗಯಾ.

**ಹೊರಡುವ ದಿನಾಂಕ : 24-02-2011 ರಿಂದ 20 ದಿನಗಳು**

ವಿವರಗಳಿಗೆ ಹಾಗೂ ರಿಜರ್ವೇಷನ್ನಿಗೆ ಕೂಡಲೇ ಸಂಪರ್ಕಿಸಿ:

# ಶ್ರೀ ಚೈತನ್ಯ ಟ್ರಾವೆಲ್ಸ್

(ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದಿದೆ)

ನಂ. 2/4, ಜಾನಕೀರಾಮ್ ಕಾಂಪ್ಲೆಕ್ಸ್, ಬಸವನಗುಡಿ ರಸ್ತೆ, ಉಮಾ ಟಾಕೀಸ್ ಬಸ್ ಸ್ಟಾಪ್ ಹತ್ತಿರ,
ಚಾಮರಾಜಪೇಟೆ, ಬೆಂಗಳೂರು – 560 018 ದೂರವಾಣಿ : 26508925, 26674860
E-mail : Chaitanyayatra@yahoo.co Visit us at : www.srichaitanyatravels

# ಶ್ರೀಮಾತೆ ಮತ್ತು ಸ್ತ್ರೀಸಮಾನತಾವಾದ

## ವೈಪರೀತ್ಯ

ಭಾರತ ವೈಪರೀತ್ಯಗಳ ನಾಡು. ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಆಧ್ಯಾತ್ಮಿಕ ಚಿಂತನೆಗಳು ಇಲ್ಲಿ ಮೂಡಿಬಂದವು. ಆದರೆ ಅವುಗಳನ್ನು ಭಾರತದ ಜನಸಾಮಾನ್ಯರಿಗೆ ಪರಿಚಯಿಸದೆ, ಅವು ತಮ್ಮ ಪ್ರಾಯೋಗಿಕ ಮೌಲ್ಯವನ್ನು ಕಳೆದುಕೊಂಡವು. ಹೀಗಾಗಿಯೇ ಕಳೆದ ಒಂದು ಸಾವಿರ ವರ್ಷಗಳಲ್ಲಿ ನಮ್ಮ ಸಮಾಜ ತನ್ನ ಸಾಮರ್ಥ್ಯವನ್ನು ಕಳೆದುಕೊಂಡಿತು, ಸತ್ವಹೀನವಾಯಿತು.

ಈ ಹಿನ್ನೆಲೆಯಲ್ಲಿ ಭಾರತೀಯ ಮಹಿಳೆಯರ ಪರಿಸ್ಥಿತಿಯನ್ನು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಕೆಲವು ಸ್ಮೃತಿಗ್ರಂಥಗಳನ್ನು ಬಿಟ್ಟರೆ, ನಮ್ಮ ಶಾಸ್ತ್ರಗಳಲ್ಲಿ ಯಾವುದರಲ್ಲಿಯೂ, ಸ್ತ್ರೀ-ಅಸಮಾನತೆಯನ್ನು ಕಾಣುವುದಿಲ್ಲ. ಹಿಂದಿನಿಂದಲೂ ನಮ್ಮದು ಪುರುಷಪ್ರಧಾನ ಸಮಾಜವೇ ಆಗಿದ್ದರೂ, ವೇದೋಪನಿಷತ್ತುಗಳ ಕಾಲದಲ್ಲಿ, ವ್ಯವಸ್ಥಿತವಾಗಿ ಸ್ತ್ರೀಯರನ್ನು ಅನಾದರಿಸುವ ಪದ್ಧತಿ ಇತ್ತು ಎಂದು ಹೇಳಲು ಬರುವುದಿಲ್ಲ. ತದನಂತರ 'ಮಹಿಳೆಯರ ಪಾವಿತ್ರ್ಯತೆ'ಯನ್ನು ಕಾಪಾಡುವ ಆತುರ-ಕಾತರಗಳನ್ನು ಭಾರತೀಯ ಇತಿಹಾಸದಲ್ಲಿ ಕಾಣುತ್ತೇವೆ. ನಿರಂತರವಾಗಿ ನಡೆಯುತ್ತಿದ್ದ ಯುದ್ಧಗಳು, ಅರಾಜಕತೆ, ಪರಕೀಯ ಸಂಸ್ಕೃತಿಗಳ ದಬ್ಬಾಳಿಕೆ ಮತ್ತು ಪ್ರಭಾವಗಳು ಇದಕ್ಕೆ ಕಾರಣ. ದೈಹಿಕವಾಗಿ ಬಲಹೀನರಾದ ಸ್ತ್ರೀಯರ ರಕ್ಷಣೆಯೇ ಇಲ್ಲಿ ಮುಖ್ಯವಾಯಿತು. ಹೀಗಾಗಿ ಅವರಿಗೆ ಸಿಗಬೇಕಾದ ಮೂಲಭೂತ ಹಕ್ಕುಗಳ ಅಪಮೌಲ್ಯವಾಯಿತು.



ಈ ವೈಪರೀತ್ಯದ ಕರಾಳ ವಿಕೃತಿಗಳಾದ ಸತಿಪದ್ಧತಿ, ಬಾಲ್ಯವಿವಾಹ, ವಿಧವೆಯರ ಶೋಷಣೆ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಅನೇಕ ಮಹನೀಯರು ಹೋರಾಡಿದರು. ಅದಕ್ಕೆ ಅವಕಾಶವೀಯುವ ಸಾಂಪ್ರದಾಯಿಕ ನಂಬಿಕೆಗಳನ್ನು ಟೀಕಿಸಿದರು. ಆದರೆ, ಸುಧಾರಣೆಯ ಈ ಭರದಲ್ಲಿ, ಭಾರತೀಯ ಸಂಸ್ಕೃತಿಯು ಮಹಿಳೆಯರಿಗೆ ನೀಡಿರುವ ಉನ್ನತ ಮಟ್ಟದ ಗೌರವ ಮತ್ತು ಸ್ಥಾನಮಾನಗಳನ್ನು ಅವರಲ್ಲಿ ಬಹುತೇಕರು ಮರೆತೇಬಿಟ್ಟರು. ಅವುಗಳನ್ನು ಎತ್ತಿಹಿಡಿಯಲು ಮತ್ತು ಜನಸಾಮಾನ್ಯರಿಗೆ ಪರಿಚಯಿಸಲು ಪ್ರಯತ್ನಿಸಲಿಲ್ಲ. ಹೀಗಾಗಿ ಸ್ತ್ರೀಯರ ಎಲ್ಲ ಬಗೆಯ ತೊಂದರೆಗಳಿಗೆ ಹಿಂದೂಧರ್ಮವನ್ನು ಸಾರಾಸಗಟಾಗಿ ದೂಷಿಸುವುದು ಪ್ರತಿಷ್ಠೆಯೇ ಆಗಿಬಿಟ್ಟಿತು. ಈಗಲೂ ಈ ನಕಾರಾತ್ಮಕ ಮತ್ತು ನಿಂದಾತ್ಮಕ ಪ್ರವೃತ್ತಿಯನ್ನೇ ನಮ್ಮ (ಅ)ಬುದ್ಧಿಜೀವಿಗಳು ಮುಂದುವರಿಸಿದ್ದಾರೆ. ಇದರಿಂದ ಜನಮಾನಸದಲ್ಲಿ ಅಪನಂಬಿಕೆ, ಅವಿಶ್ವಾಸಗಳು ಹೆಚ್ಚಿವೆಯೇ ಹೊರತು, ರಚನಾತ್ಮಕ ಮತ್ತು ಸಕಾರಾತ್ಮಕ ಸಾಮಾಜಿಕ ಪರಿವರ್ತನೆ ಇಂದಿಗೂ ಸಾಧ್ಯವಾಗಿಲ್ಲ.

ಈ ಶತಮಾನದ ಮೊದಲ ದಶಕದಲ್ಲಂತೂ ಇಂಥ ವಿಚ್ಛಿದ್ರಕಾರಿ ಸಮಾಜಸುಧಾರಣಾ ಧೋರಣೆಗಳು ನಮ್ಮ ಸಮಾಜಕ್ಕೆ ಆಘಾತಕಾರಿಯಾಗಿ ಪರಿಣಮಿಸಿಬಿಟ್ಟಿವೆ. ಒಂದು ಕಡೆ ಬಹುಸಂಖ್ಯೆಯ ಗ್ರಾಮೀಣ ಮಹಿಳೆಯರು ಅಜ್ಞಾನ, ದಾರಿದ್ರ್ಯ, ಶೋಷಣೆಗಳಿಗೆ ಸತತವಾಗಿ ತುತ್ತಾಗಿ, ದಿನನಿತ್ಯವೂ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದರೆ, ಇತ್ತ ಪಟ್ಟಣ ಪ್ರದೇಶಗಳಲ್ಲಿ, ಲಜ್ಜಾಹೀನ ಪಾಶ್ಚಾತ್ಯ ರೀತಿನೀತಿಗಳನ್ನು ಯಾವುದೇ ವಿವೇಕವಿಲ್ಲದೆ ಒಪ್ಪಿಕೊಂಡಿದ್ದರಿಂದ, ಸ್ವೇಚ್ಛಾಚಾರ, ಅತಿಪ್ರದರ್ಶನ, ಭೋಗಲಾಲಸೆ, ಲೈಂಗಿಕ ದುರುಪಯೋಗ ಮೊದಲಾದ ಹೊಸ ಹೊಸ ಸಾಮಾಜಿಕ ಪಿಡುಗುಗಳಿಗೆ ಮಹಿಳೆಯರು ಬಲಿಯಾಗುತ್ತಿದ್ದಾರೆ. ಇದಕ್ಕೆ ಪರಿಹಾರ ಏನು? ಸ್ತ್ರೀಯರನ್ನು ಕೀಳಾಗಿ ನೋಡುವ ಸಾಂಪ್ರದಾಯಿಕ ಮೂಢನಂಬಿಕೆಗಳ ವಿನಾಶ ಮತ್ತು ಅದೇ ಸಮಯದಲ್ಲಿಯೇ, ಆಧುನಿಕ ಭೌತಿಕ ಪ್ರಗತಿಯು ಹುಟ್ಟುಹಾಕಿರುವ ಭೋಗಲಾಲಸೆಗೆ ಕಡಿವಾಣ. ಈ ಎರಡೂ ಅತಿರೇಕಗಳಿಂದ ಉಂಟಾಗಿರುವ ವೈಪರೀತ್ಯವು ಅಂತ್ಯವಾಗಬೇಕು; ಸ್ವಾತಂತ್ರ್ಯ ಮತ್ತು ಸ್ವೇಚ್ಛಾಚಾರಗಳ ನಡುವಿನ ಗಡಿರೇಖೆಯನ್ನು ಸ್ತ್ರೀಯರು ಸ್ವತಃ ತಾವೇ ಕಂಡುಕೊಳ್ಳಬೇಕು. ಆಂತರಿಕ ಸಂಯಮ ಮತ್ತು ಬಾಹ್ಯ ಸ್ವಾತಂತ್ರ್ಯಗಳ ನಡುವೆ ಸಮನ್ವಯವನ್ನು ಸಾಧಿಸಬೇಕು. ಇದೇ ಈ ಯುಗದ ಆದರ್ಶ ನಾರಿಯರನ್ನು ಸೃಷ್ಟಿಸಬಲ್ಲುದು.





## ಕೆಸರಿನಲ್ಲಿ ಕಮಲ

ಶ್ರೀಮಾತೆಯವರು ಹುಟ್ಟಿದುದು ೧೫೦ ವರ್ಷಗಳಿಗೂ ಹಿಂದೆ. ಅವರು ಸಾಂಪ್ರದಾಯಿಕ ಪರಿಸರದಲ್ಲಿ ಬೆಳೆದುಬಂದರು. ಅವರಿಗೆ ಶಾಲಾಶಿಕ್ಷಣ ದೊರಕಲಿಲ್ಲ. ಬಾಲ್ಯದಲ್ಲಿಯೇ ಮನೆಗೆಲಸದ ಜವಾಬ್ದಾರಿಯನ್ನು ಹೊತ್ತುಕೊಂಡರು. ಕೇವಲ ಐದು ವರ್ಷಕ್ಕೆ ವಿವಾಹವಾಯಿತು. ಪತಿಯ ಸಾನ್ನಿಧ್ಯ ದೊರೆತದ್ದು ಇನ್ನೂ ಹಲವಾರು ವರ್ಷಗಳ ನಂತರವೇ. ಹಿರಿಯಕ್ಕನಾಗಿ ತಮ್ಮಂದಿರನ್ನು ನೋಡಿಕೊಳ್ಳುವ ಹೊಣೆಗಾರಿಕೆ ಬೇರೆ. 'ಹುಚ್ಚು ಗಂಡನ ಹೆಂಡತಿ' ಯೆಂಬ ಅಪಮಾನವನ್ನೂ ಬಾಲಕಿ ಶಾರದಾ ನುಂಗಿಕೊಳ್ಳಬೇಕಾಯಿತು. ತದನಂತರವೂ ಲೌಕಿಕಾರ್ಥದಲ್ಲಿ ಅವರು ಯಾವ ದಾಂಪತ್ಯಸುಖವನ್ನೂ ಅನುಭವಿಸಲಿಲ್ಲ. ವಿಪರೀತ ದುಡಿಮೆ, ಕಿತ್ತುತಿನ್ನುವ ದಾರಿದ್ರ್ಯ, ಒಂಟಿ ಜೀವನ. ಪತಿಯು ಅವತಾರವೆನಿಸಿಕೊಂಡಿದ್ದರೂ, ಸತಿ ಬಾಳಿದ್ದು ಅತಿ ಸಾಧಾರಣ ಬಾಳು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರವಂತೂ, ಎಲ್ಲ ರೀತಿಯಲ್ಲಿಯೂ ಶ್ರೀಮಾತೆ ಹಲವಾರು ಕಷ್ಟಗಳನ್ನು ಅನುಭವಿಸಬೇಕಾಯಿತು. ವಯಸ್ಸಾದ ಮೇಲೆಯೂ ತಮ್ಮ ಲೋಭಿ ತಮ್ಮಂದಿರಿಂದ ಹಲವಾರು ರೀತಿಯ ನೋವು, ಅಪಮಾನಗಳನ್ನು ಉಣ್ಣಬೇಕಾಯಿತು. ಕಡೆಗೆ 'ರಾಧಿ'ಯಂತಹ ಹುಚ್ಚುಹುಡುಗಿಯನ್ನು ನೋಡಿಕೊಳ್ಳಲು ಮುಂದಾಗಿ, ಅನೇಕ ರೀತಿಯ ತೊಂದರೆಗಳನ್ನು ಹೊರಬೇಕಾಯಿತು. ಆಧುನಿಕ ಸ್ತ್ರೀಸಮಾನತಾವಾದಿಗಳು ಶ್ರೀಮಾತೆಯವರು ಶೋಷಿತ ಮಹಿಳೆಯಾಗಿದ್ದರು ಎಂದು ಹೇಳಬಹುದು; ಅತ್ಯಂತ ದಾರುಣ ಬದುಕನ್ನು ಬಾಳಿದರು ಎಂದೂ ಅಭಿಪ್ರಾಯಪಡಬಹುದು. ಆದರೆ ಅದು ನಿಜವೇ? ಹಾಗೆಂದಾದರೂ ಶ್ರೀಮಾತೆ ಭಾವಿಸಿದ್ದರೇ? ಎಂದೆಂದಿಗೂ ಇಲ್ಲ.

ಒಬ್ಬ ಸಾಮಾನ್ಯ ಮಹಿಳೆಗೆ ಅದು ನಿಜವಾಗಿಯೂ ಶೋಚನೀಯ ಬದುಕಾಗಿ ಪರಿಣಮಿಸಬಹುದು. ಆದರೆ ಶ್ರೀಮಾತೆ ಅಂಥ ಕೆಸರಿನಂತಹ ಪರಿಸ್ಥಿತಿಗಳ ಮಧ್ಯದಲ್ಲಿಯೂ ಕಮಲದಂತೆ ಬಾಳಿದರು. ತಮ್ಮ ಸುತ್ತಮುತ್ತಲ ಸಮಾಜ ವಿಧಿಸಿದ ನೂರೆಂಟು ಕಟ್ಟುಪಾಡುಗಳನ್ನು ಮೀರಿಹೋಗಬಲ್ಲ ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಸಂಪ್ರದಾಯವನ್ನು ನಿಂದಿಸದೆ, ಪಾಲಿಸುತ್ತಲೇ, ಅದರ ನಿರ್ಬಂಧಗಳನ್ನು ಮೆಟ್ಟಿ ನಿಂತರು. ಆ ಮೂಲಕ ಯಾವುದೇ ಪುರುಷನಿಗಿಂತಲೂ ಉದಾತ್ತವಾದ ಬಾಳನ್ನು ಬಾಳಿ, ಆ ಮೂಲಕ ನೈಜ ಸ್ತ್ರೀಸ್ವಾತಂತ್ರ್ಯವನ್ನು ತಮ್ಮ ಅದ್ಭುತಚಾರಿತ್ರ್ಯದ ಮೂಲಕ ಗಳಿಸಿಕೊಂಡರು, ತಮ್ಮ ಜೀವನದಲ್ಲಿ ಅದನ್ನು ಪ್ರದರ್ಶಿಸಿದರು; ಆ ಮೂಲಕ ವಿಶ್ವಮಾನ್ಯರಾದರು.



ಶ್ರೀಮಾತೆಯವರ ಈ ವಿಧಾನಕ್ಕೂ, ಆಧುನಿಕ ಸ್ತ್ರೀಸಮಾನತಾವಾದಿಗಳ ವಿಚಾರಕ್ಕೂ ಅಜಗಜಾಂತರ ವ್ಯತ್ಯಾಸ ಇರುವುದನ್ನು ನಾವು ಗಮನಿಸಬಹುದು. ತಾವು ಪಡಬೇಕಾದ ಕಷ್ಟನಷ್ಟಗಳು ಶ್ರೀಮಾತೆಯವರ ಪಾಲಿಗೆ ಶೋಷಣೆಯಾಗಿರಲಿಲ್ಲ. ಅವು ಒಬ್ಬ ಸ್ತ್ರೀ ತನ್ನ ಅಂತಸ್ಸತ್ವವನ್ನು ಜಾಗೃತಗೊಳಿಸಿಕೊಂಡು, ತುಂಬು ವಿಶ್ವಾಸದಿಂದ, ಆತ್ಮವಿಕಾಸದೆಡೆಗೆ ಸಾಗಲು ಬೇಕಾದ ಮೆಟ್ಟಿಲುಗಳಾಗಿದ್ದವು. ಸಂಪ್ರದಾಯವು ಮಹಿಳೆಯ ಜೀವನಪುಷ್ಪವನ್ನು ಅರಳದಂತೆ ಹೊಸಕಿಹಾಕಲು ಯಾವಾಗಲೂ ಪ್ರಯತ್ನಿಸುತ್ತದೆ. ಆದರೆ ಧೀರಮಾತೆಯಾದ ಶ್ರೀಶಾರದಾದೇವಿಯವರು, ಸಂಪ್ರದಾಯದ ಬರಡು ನಿಂದಕರಾಗದೆ, ತಮ್ಮ ಆದರ್ಶ ವ್ಯಕ್ತಿತ್ವದಿಂದ ಅದರ ಇತಿಮಿತಿಗಳನ್ನು ಮೀರಿ ಅರಳಿ ನಿಂತರು. ತಮ್ಮ ಬಾಳಿನ ಸೌರಭವನ್ನು ದಿಕ್ಕುದಿಕ್ಕುಗಳಲ್ಲಿ ಹರಡಿದರು. ಸ್ತ್ರೀಯರು **ಆತ್ಮಸಂಯಮ, ಆತ್ಮವಿಶ್ವಾಸ** ಮತ್ತು **ಆತ್ಮವಿಕಾಸ** – ಇವುಗಳನ್ನು ಸಾಧಿಸಿಕೊಳ್ಳುವುದೇ ಸ್ತ್ರೀಸಮಾನತೆಯನ್ನು ಸಾಧಿಸುವ ರಾಜಮಾರ್ಗ ಎಂದು ಶ್ರೀಮಾತೆಯವರು ತೋರಿಸಿಕೊಡುತ್ತಾರೆ. ಪವಿತ್ರ ಚಾರಿತ್ರ್ಯವೇ ಎಲ್ಲ ಬಗೆಯ ಶೋಷಣೆಗಳನ್ನು ಮೆಟ್ಟಿಹಾಕುವ ವಿಧಾನ ಎಂದು ತಿಳಿಹೇಳುತ್ತಾರೆ. ರಚನಾತ್ಮಕ ಮತ್ತು ಸಕಾರಾತ್ಮಕವಾಗಿ ನೈಜ ಸ್ತ್ರೀಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವ ಬಗೆಯನ್ನು, ತಮ್ಮ ಆದರ್ಶ ಜೀವನದ ಉತ್ತಮ ನಿದರ್ಶನದ ಮೂಲಕವೇ ಅವರು ಪ್ರದರ್ಶಿಸುತ್ತಾರೆ.

## ರಚನಾತ್ಮಕ ಕ್ರಾಂತಿ



ಸಂಪ್ರದಾಯವೆನ್ನುವುದು ಸಮಾಜದ ಹೊರಗಿನಿಂದ ಹೇರಿದ್ದಲ್ಲ. ನೂರಾರು ವರ್ಷಗಳ ಐತಿಹಾಸಿಕ ಹಾಗೂ ಸಾಮಾಜಿಕ ಬೆಳವಣಿಗೆಗಳಿಂದ ಸಹಜವಾಗಿ ಮೂಡಿಬಂದದ್ದು. ಸಂಪ್ರದಾಯದಲ್ಲಿ ಇರುವುದೆಲ್ಲವೂ ಕೆಡುಕಾದುದೂ ಅಲ್ಲ. ಸಾಮಾಜಿಕ ಪರಿಸ್ಥಿತಿಗೆ, ಐತಿಹಾಸಿಕ ಅಗತ್ಯತೆಗೆ ಅನುಗುಣವಾಗಿ ಅದರ ರೀತಿನೀತಿಗಳು, ಕಟ್ಟುಪಾಡುಗಳು ಬದಲಾಗುತ್ತಿರುತ್ತವೆ, ಬದಲಾಗಲೇಬೇಕು. ಅಂತಹ ಪರಿವರ್ತನೆಯು ಅಂತರ್ಗತವಾಗಿ ಒಡಮೂಡಿದಾಗಲೇ ಅದು ಶಾಶ್ವತವಾಗಿ ನಿಲ್ಲುವುದು, ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುವುದು. ಈ ಪ್ರಕ್ರಿಯೆಗೆ



ಕಾನೂನು ಕಟ್ಟಲೆಗಳು ಕೇವಲ ಮಾರ್ಗದರ್ಶಿ ಸೂತ್ರಗಳಾಗಬಲ್ಲವೇ ಹೊರತು, ಆರೋಗ್ಯಕರ ಪರಿವರ್ತನೆಯನ್ನು ತರುವ ಚೈತನ್ಯದಾಯಕ ಪ್ರಚೋದಕಗಳಾಗಲಾರವು. ಅಂತಹ ರಚನಾತ್ಮಕ ಪ್ರಚೋದನೆ ಕೇವಲ ಮಹಾನ್‌ವ್ಯಕ್ತಿಗಳಿಂದ ಮಾತ್ರವೇ ಸಮಾಜಕ್ಕೆ ಒದಗುವುದಕ್ಕೆ ಸಾಧ್ಯ. ಅವರು ತಮ್ಮ ಪವಿತ್ರ ಚಾರಿತ್ರ್ಯದಿಂದ, ಪ್ರಭಾವಶಾಲಿ ವ್ಯಕ್ತಿತ್ವದಿಂದ, ಉನ್ನತ ನಡವಳಿಕೆಯಿಂದ ಸಾಮಾಜಿಕ ಪರಿವರ್ತನೆಯ ನೈಜ ಹರಿಕಾರರಾಗಬಲ್ಲರು. ನಿಜವಾದ ಅರ್ಥದಲ್ಲಿ ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡಬಲ್ಲರು.

೧೯ ನೆಯ ಶತಮಾನದ ಉತ್ತರಾರ್ಧದಲ್ಲಿ ದಿವ್ಯತ್ರಯರಾದ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು ಇಂಥ ಅನುಪಮ ಆಧ್ಯಾತ್ಮಿಕ ಮತ್ತು ಸಾಮಾಜಿಕ ಕ್ರಾಂತಿಗೆ ಚೇತನಾದಾಯಕರಾಗಿದ್ದನ್ನು ಇತಿಹಾಸ ಗುರುತಿಸುತ್ತದೆ. ಅದರಲ್ಲೂ ಒಬ್ಬ ಮಹಿಳೆಯಾಗಿ, ಈ ಬೆಳವಣಿಗೆಯಲ್ಲಿ ಶ್ರೀಮಾತೆಯವರ ಪಾತ್ರ ಅತ್ಯಂತ ವಿಶಿಷ್ಟವಾದದ್ದು, ಮಹತ್ವವಾದದ್ದು, ಮನೋಜ್ಞವಾದದ್ದು.

## ಆತ್ಮಸಂಯಮ

ಇಂದ್ರಿಯಸಂಯಮ ಇದರ ಮೊದಲ ಮೆಟ್ಟಲು. ಇಂದ್ರಿಯಸಂಯಮದ ಮಾರ್ಗದರ್ಶಿಯಾಗುವುದು ಮಾನಸಿಕ ಸಂಯಮ. ಮನಸ್ಸು ಇಂದ್ರಿಯಗಳ ಸಾಮರ್ಥ್ಯದ ಸಮರ್ಥ ನಿಯಂತ್ರಣವೇ, ಸಾಮರಸ್ಯವೇ 'ಸಂಯಮ' ಎನಿಸಿಕೊಳ್ಳುತ್ತದೆ. ಆಧುನಿಕ ಮಹಿಳೆ ಇಂಥ ಸಂಯಮವನ್ನು ಕಳೆದುಕೊಂಡು ಅತಂತ್ರಳಾಗಿದ್ದಾಳೆ. ಆದ್ದರಿಂದಲೇ, ಹಣ, ಅಧಿಕಾರ, ಅಂತಸ್ತು – ಈ ಬಗೆಯ ಭೌತಿಕ ವಿಷಯಗಳಲ್ಲಿ ಎಷ್ಟೇ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದರೂ, ಮನಶ್ಶಾಂತಿ ಇಲ್ಲದೇ ತೊಳಲಾಡುತ್ತಿದ್ದಾಳೆ. ಅದಕ್ಕಿಂತಲೂ ಹೀನವಾದ ಸ್ಥಿತಿಯೆಂದರೆ, ಅನೇಕ ಮಹಿಳೆಯರು ಭೌತಿಕ ಸುಖಸಾಧನಗಳ ಅತ್ಯಾಸೆಗೆ ಬಲಿಯಾಗಿ, ಚಾರಿತ್ರ್ಯಹೀನರಾಗುತ್ತಿದ್ದಾರೆ, ಇದನ್ನೇ 'ಸ್ತ್ರೀಸಮಾನತೆ'ಯೆಂದು ಯಾರಾದರೂ ಪ್ರತಿಪಾದಿಸುವುದಾದರೆ, ಅದಕ್ಕಿಂತಲೂ ಕೀಳುಮಟ್ಟದ ನೈತಿಕ ಅಧಃಪತನ ಬೇರೊಂದಿಲ್ಲ.

ಸಂಯಮವಿಲ್ಲದ ಸ್ವಾತಂತ್ರ್ಯ ಸ್ವೇಚ್ಛಾಚಾರವೇ ಸರಿ. ಹೀಗಾಗಿ ಆಧುನಿಕ ಮಹಿಳೆ ಸ್ವಾತಂತ್ರ್ಯದ ಮೊದಲ ಆವಶ್ಯಕತೆಯಾದ, 'ಆತ್ಮಸಂಯಮ'ವನ್ನು ರೂಢಿಸಿಕೊಳ್ಳಬೇಕು. ಶ್ರೀಮಾತೆಯವರು ತಮ್ಮ ಜೀವನದಲ್ಲಿ ಎಲ್ಲ ರೀತಿಯಲ್ಲಿಯೂ ಅದ್ಭುತವಾದ ಸಂಯಮವನ್ನು ಪ್ರದರ್ಶಿಸಿದರು. ಎಂಥ ಕಷ್ಟನಷ್ಟಗಳೂ, ಯಾವ ಬಗೆಯ ಪ್ರಲೋಭನೆಯೂ, ಅವರ ಮನಸ್ಸನ್ನು ವಿಚಲಿತಗೊಳಿಸಲಿಲ್ಲ. ಗೃಹಸ್ಥ ಜೀವನದಲ್ಲಿಯೇ ತಪಸ್ವಿನಿಯಾಗಿ ಬಾಳಿದ ಬಾಳು ಅವರದು. ಹಾಗೆಂದು ಯಾವ ಜವಾಬ್ದಾರಿಯಿಂದಲೂ ಅವರು ಹಿಂದೆ ಸರಿಯಲಿಲ್ಲ. ಅದಕ್ಕೆ ಬದಲಾಗಿ, ಎಲ್ಲಾ ಬಗೆಯ ಗೃಹಕೃತ್ಯದ ಭಾರವನ್ನೂ ಹೊತ್ತುಕೊಂಡು ಶಾಂತವಾಗಿ ನಿರ್ವಹಿಸಿ, ಜಯಿಸಿದ ಧೀರೋದಾತ್ತ ಮಹಿಳೆ ಅವರು. ಹೀಗಾಗಿ ಶ್ರೀಮಾತೆಯವರು ಸ್ತ್ರೀಸಮಾನತೆಯ ನೈಜ ಮೂರ್ತರೂಪರಾಗಿ ನಿಲ್ಲುತ್ತಾರೆ. ಇಂದಿನ ಮಹಿಳೆಯರಿಗೆ ಮಾರ್ಗದರ್ಶಿ ದೀಪವಾಗಿದ್ದಾರೆ.

**ಹೆಂಗಸರು ಅಷ್ಟು ಬೇಗ ಕೋಪಕ್ಕೆ ಗುರಿಯಾಗಬಾರದು. ಅವರು ಸ್ವಲ್ಪ ಸಹನೆಯನ್ನು ತಂದುಕೊಳ್ಳಬೇಕು. ಅವರು ಚಿಕ್ಕವಯಸ್ಸಿನಲ್ಲಿ ತಂದೆತಾಯಿಯರ ರಕ್ಷಣೆಯಲ್ಲಿರುವವರು. ಹೆಂಗಸರು ತುಂಬ ಸೂಕ್ಷ್ಮ. ಒಂದು ಸಣ್ಣ ಮಾತಿಗೆಲ್ಲ ತಳಮಳಿಸಿಬಿಡುತ್ತಾರೆ. ಇತ್ತೀಚಿಗಂತೂ ಮಾತು ಬಹಳ ಅಗ್ಗವಾಗಿ ಬಿಟ್ಟಿದೆ. ಹೆಂಗಸರೆಲ್ಲ ಎಷ್ಟೇ ಕಷ್ಟಬಂದರೂ ತಂದೆತಾಯಿಗಳೊಡನೆ ಸಹನೆಯಿಂದ ಇರುವುದನ್ನು ಕಲಿಯಬೇಕು.**

**–ಶ್ರೀಶಾರದಾದೇವಿ**

## ಆತ್ಮವಿಶ್ವಾಸ

ಆತ್ಮಸಂಯಮದಿಂದ ಉಂಟಾಗುವ ವಿಶ್ವಾಸವೇ ನಿಜವಾದಂಥ ಆತ್ಮವಿಶ್ವಾಸ. ಏಕೆಂದರೆ ಅದು ವಾಸ್ತವಿಕ ನೆಲಗಟ್ಟಿನ ಮೇಲೆ ಇರುತ್ತದೆ, ಆಂತರಿಕ ಶಕ್ತಿ, ಸಾಮರ್ಥ್ಯಗಳ ನೈಜ ಪ್ರಜ್ಞೆ ಅಲ್ಲಿರುತ್ತದೆ. ಅದನ್ನು ಪ್ರಕಟಮಾಡಿಕೊಳ್ಳಬೇಕೆಂಬ ಅದಮ್ಯ ಆಕಾಂಕ್ಷೆ ಮೂಡುತ್ತದೆ. ಇಂಥ ಆತ್ಮವಿಶ್ವಾಸವನ್ನು ಸ್ತ್ರೀಯರು ಬೆಳೆಸಿಕೊಂಡಾಗಲೇ ನಿಜವಾದ ಸ್ವಾತಂತ್ರ್ಯದ ಹೆದ್ದಾರಿಯಲ್ಲಿ ಅವರು ಸಾಗಬಲ್ಲರು. ಆಧುನಿಕ ಮಹಿಳೆಯಲ್ಲಿ ಕಾಣುವ ಆತ್ಮವಿಶ್ವಾಸ, ಆಂತರಿಕ ಸಂಯಮದಿಂದ ಮೂಡಿಬಂದದ್ದಲ್ಲ. ಭ್ರಮೆಯಿಂದ ಹುಟ್ಟಿಬಂದದ್ದು. ತನ್ನಲ್ಲಿರುವ ಅಪಾರ ಸಾಧ್ಯತೆಗಳನ್ನು ಅವಳು ಇನ್ನೂ ಕಂಡುಕೊಂಡಿಲ್ಲ. ಅವಳ ಸ್ವಾತಂತ್ರ್ಯ ಪ್ರಜ್ಞೆ ಲೌಕಿಕ ಸಾಧನೆಗಳಿಗಷ್ಟೇ ಸೀಮಿತವಾಗಿಬಿಟ್ಟಿದೆ. ತನ್ನ ಆಧ್ಯಾತ್ಮಿಕ ಸತ್ವವನ್ನು ಕಂಡುಕೊಳ್ಳುವುದರಲ್ಲಿ ಹಾಗೂ ಆ ಮೂಲಕ ನೈತಿಕ ಶಕ್ತಿಯನ್ನು ಮೆರೆಯುವುದರಲ್ಲಿ ಆಕೆ ವಿಫಲಳಾಗಿದ್ದಾಳೆ. ಹೀಗಾಗಿ ಕೆಲವೊಮ್ಮೆ ಸ್ವಾತಂತ್ರ್ಯವೆಂಬ ಹೆಸರಿನಲ್ಲಿ ಪುರುಷಪ್ರಧಾನ ಸಮಾಜ ಒಡ್ಡಿರುವ ಕಪಟತನದ ಬಲೆಯಲ್ಲಿ ಸಿಕ್ಕಿ, ಅತಂತ್ರಳಾಗಿದ್ದಾಳೆ.

